**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**<u>O.S./</u> 231-17** **DW. <u>2</u>**

ಸಾಕ್ಷಿದಾರರ ಹೆಸರು ಃ ಅಜಯಕುಮಾರ

ತಂದೆ ಹೆಸರು ಃ ಎಸ್ ಚಂದ್ರಶೇಖರ

ವಯಸ್ಸು ಃ 36 ವರ್ಷ

ಉದ್ಯೋಗ ಃ ಉಪ-ನೋಂದಣಾಧಿಕಾರಿ

ವಾಸಸ್ಥಳ ಃ ಹುಬ್ಬಳ್ಳಿ- ದಕ್ಷಿಣ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಎಂ ಬಿ ಎನ್ ವಕೀಲರಿಂದಃ**

ನಾನು ಕಳೆದ ಒಂದೂವರೆ ವರ್ಷದಿಂದ ನಾನು ಹುಬ್ಬಳ್ಳಿಯ ದಕ್ಷಿಣ ವಿಭಾಗದ ಉಪ-ನೋಂದಣಾಧಿಕಾರಿ ಯಾಗಿ ಸೇವೆ ಸಲ್ಲಿಸುತ್ತಿದ್ದೇನೆ.

ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ವ್ಯಾಲ್ಯೂಮ್ ನಂಃ 37 ರ ವಿಲ್ ಗೆ ಸಂಬಂಧಪಟ್ಟಂತೆ ರಜಿಸ್ಟರ ಹಾಜರಪಡಿಸುವಂತೆ ನಿರ್ದೇಶನ ನೀಡಿದ ಮೇರೆಗೆ ನಾನು ಈ ದಿನ ಮೃತ್ಯು ಪತ್ರದ ಬುಕ್ ನಂಃ 3 ರ ವ್ಯಾಲ್ಯೂಮ್ ನಂಃ 37 ರ ದಸ್ತಾವೇಜು ನಂಃ 61/1983-84 ದಿನಾಂಕಃ 05.09.1983, ಪೇಜ್ ನಂಃ 246 ರಿಂದ 249 ಇದನ್ನು ಹಾಜರಪಡಿಸಿರುತ್ತೇನೆ. ಹಾಗೂ ಅದರ ದೃಢೀಕೃತ ಪ್ರತಿ ಹಾಜರಪಡಿಸಿರುತ್ತೇನೆ. ನ್ಯಾಯಾಲಯವು ಮೂಲ ದಾಖಲೆಯೊಂದಿಗೆ ದೃಢೀಕೃತ ದಾಖಲೆಗಳನ್ನು ತಾಳೆ ಮಾಡಿ ದೃಢೀಕೃತ ಮೃತ್ಯು ಪತ್ರದ ದಾಖಲೆಯನ್ನು ನಿಡಿ.20 ಎಂದು ಗುರುತಿಸಲಾಯಿತು. ಮೂಲ ದಾಖಲೆಯನ್ನು ಸಾಕ್ಷಿಗೆ ಮರಳಿ ಅವರ ಸುಪರ್ದಿಗೆ ನೀಡಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರು ಗೈರು ಹಾಜರಾಗಿರುವುದರಿಂದ**

**ಅವರ ಪರವಾಗಿ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.